ಅ) *ದಕ್ಷಿಣ ಕನ್ನಡ ಜಿಲ್ಲೆಯ ಬ್ರಹ್ಮಾವರದಲ್ಲಿ ಸಕ್ಕರೆ ಕಾರ್ಖಾನೆಯ ಬೆಳವಣಿಗೆಯಿಂದಾಗಿ ಅಸಂಖ್ಯಾತ ಟ್ರಕ್‌ಗಳು ರಾಷ್ಟ್ರೀಯ ಹೆದ್ದಾರಿಯಲ್ಲಿ ನಿಂತುಕೊಳ್ಳುವುದರಿಂದ ಕೆಲವೊಮ್ಮೆ ಈ ಹೆದ್ದಾರಿಯಲ್ಲಿ ಇತರ ವಾಹನಗಳ ಓಡಾಟಕ್ಕೆ ಅಡಚಣೆ ಉಂಟಾಗಿರುವುದು ಲೋಕೋಪಯೋಗಿ ಇಲಾಖೆಯ ಗಮನಕ್ಕೆ ಬಂದಿದೆಯೇ? ಬ್ರಹ್ಮಾವರದ ಪ್ರವಾಸಿ ಮಂದಿರದ ಹತ್ತಿರದಲ್ಲಿ ಟ್ರಕ್ ಪಾರ್ಕಿಂಗ್ ನಿರ್ಮಿಸಿ ಈ ಸಮಸ್ಯೆಯನ್ನು ಬಗೆಹರಿಸಲು ಇಲಾಖೆಯು ಕ್ರಮ ಕೈಗೊಳ್ಳ ಬಯಸುತ್ತದೆಯೇ?*

ಆ) *ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸುಗಮವಾಗಿ ವಾಹನ ಸಂಚಾರವಾಗುವಂತೆ ಸರ್ಕಾರದವರು ಕೈಗೊಳ್ಳಬಯಸುವ ಕ್ರಿಯಾಯೋಜನೆಗಳಾವುವು?*

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ

ಆ) ಹೌದು

ಇ) ಸಂಚಾರದಟ್ಟಣೆಯನ್ನು ಆಧರಿಸಿ ನಾಲ್ಕು ಪಥ ವಾಹನ ಮಾರ್ಗ ನಿರ್ಮಿಸುವುದು, ಷೇವ್ಡ್ ಶೋಲ್ಡರ್ಸ್, ಹಾಗೂ ಲೇಬೈಗಳನ್ನು ನಿರ್ಮಿಸುವುದು ಇತ್ಯಾದಿ.

ಉಡುಪಿ ತಾಲ್ಲೂಕು ಬ್ರಹ್ಮಾವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಕೆಲವು ಸ್ಥಳಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನು ಅಗಲಗೊಳಿಸುವುದು

198-ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ಬ್ರಹ್ಮಾವರ ವಿಧಾನಸಭಾ ಕ್ಷೇತ್ರದ ರಾಷ್ಟ್ರೀಯ ಹೆದ್ದಾರಿ 17ರ, 295 ಕಿ.ಮೀ. ಕೋಟದಲ್ಲಿ, 301 ಕಿ.ಮೀ. ಸಾಸ್ತಾನದಲ್ಲಿ, 307 ಕಿ.ಮೀ. ಬ್ರಹ್ಮಾವರದಲ್ಲಿ 311.4 ಕಿ.ಮೀ. ಉಪ್ಪೂರಿನಲ್ಲಿ 314.4 ಕಿ.ಮೀ ಕಲ್ಯಾಣಪುರದಲ್ಲಿ, ರಾಷ್ಟ್ರೀಯ ಹೆದ್ದಾರಿಯ ಯಾವುದಾದರೂ ಒಂದು ಬದಿಯನ್ನು ಸಾರ್ವಜನಿಕರ, ಓಡಾಡುವ ವಾಹನಗಳ ಹಿತದೃಷ್ಟಿಯಿಂದ ಅಗಲಗೊಳಿಸುವ ಅವಶ್ಯಕತೆ ಲೋಕೋಪಯೋಗಿ ಇಲಾಖೆಗೆ ಕಂಡು ಬಂದಿಲ್ಲವೆ?*

ಆ) *ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರದವರು ಈ ಕೈಗೊಂಡ ಕ್ರಮಗಳೇನು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಕಂಡುಬಂದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಚುಳ್ಕಿನಾಲಾ ಯೋಜನೆಗಾಗಿ ಹಣ ಬಿಡುಗಡೆ

196 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೀದರ್ ಜಿಲ್ಲೆಯ, ಬಸವಕಲ್ಯಾಣ ತಾಲ್ಲೂಕಿನ ಚುಳ್ಕಿನಾಲಾ ಯೋಜನೆಗೆ ಸರ್ಕಾರವು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಹಾಗೂ ಇದುವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ?*

ಆ) *ಈ ಯೋಜನೆಗಾಗಿ ಸರ್ಕಾರವು ಪ್ರತಿ ಸಾಲಿನಲ್ಲಿ 7.00 ಕೋಟಿ ಹಣ ಬಿಡುಗಡೆ ಮಾಡಲು ಸರ್ಕಾರವು ಏನಾದರೂ ಕ್ರಮವನ್ನು ಕೈಗೊಂಡಿದೆಯೇ? ಹಾಗಿಲ್ಲದಿದ್ದಲ್ಲಿ ಕಾರಣವೇನು?*

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :